**OS-207/2019 P.W.1**

ದಿನಾಂಕಃ21.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು</u> ಃ 5 ರಿಂದ 7 ನೇ ಪ್ರತಿವಾದಿಯ ಪರ ವಕೀಲರಿಂದ ಃ-

ನಮ್ಮ ತಂದೆಯವರು ವಿಭಾಗ ಮಾಡಿಕೊಂಡಿರುವ ಆಸ್ತಿಯ ಪೂರ್ವದ ಕಡೆ ಉರುಳಿಬೋರೆ ರಸ್ತೆ ಇದೆ ಎಂದರೆ ಸರಿ. ಉರುಳಿಬೋರೆ ರಸ್ತೆ ಮತ್ತು ನಮ್ಮ ತಂದೆಯವರು ವಿಭಾಗ ಮೂಲಕ ಪಡೆದ ಸ್ವತ್ತಿನ ಮಧ್ಯೆ 10 ಎಕರೆ ಜಮೀನು ಇರುತ್ತದೆ. ಉರುಳಿಬೋರೆ ರಸ್ತೆ ಮತ್ತು ನಮ್ಮ ತಂದೆಯವರು ವಿಭಾಗ ಮೂಲಕ ಪಡೆದ ಸ್ವತ್ತಿನ ಮಧ್ಯೆ 10 ಎಕರೆ ಜಾಮೀನಿನಲ್ಲಿ ನಾನು 4 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆ. ಸದರಿ ಜಮೀನನ್ನು ನಾನು ರಾಮಣ್ಣ ರವರಿಂದ ಕ್ರಯಕ್ಕೆ ಪಡೆದಿರುತ್ತೇನೆ. ನಾನು ರಾಮಣ್ಣ ರವರಿಂದ ಕ್ರಯಕ್ಕೆ ಪಡೆದ ಸ್ವತ್ತಿನ ಆಸ್ತಿಯ ಪೂರ್ವದ ಕಡೆ ಉರುಳಿಬೋರೆ ರಸ್ತೆ ಬರುತ್ತದೆ ಎಂದರೆ ಸರಿ. ಪಶ್ಚಿಮದ ಕಡೆ ನಮ್ಮ ತಂದೆಯವರು ವಿಭಾಗ ಮೂಲಕ ಪಡೆದ ಸ್ವತ್ತುಗಳು ಬರುತ್ತದೆ. ಉರುಳಿಬೋರೆ ರಸ್ತೆ ಮತ್ತು ನಮ್ಮ ತಂದೆಯವರು ವಿಭಾಗ ಮೂಲಕ ಪಡೆದ ಸ್ವತ್ತಿನ ಮಧ್ಯದಲ್ಲಿ 10 ಎಕರೆ ಜಮೀನಿನ ಪೈಕಿ 2 ಎಕರೆ ಜಮೀನನ್ನು ಸುಮಾ ರವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ವಿಜಯ್ ಕುಮಾರ್ ರವರಿಂದ 5 ನೇ ಪ್ರತಿವಾದಿಯು ಪಡೆದುಕೊಂಡಿರುವ ಸ್ವತ್ತಿನ ಯಾವ ಕಡೆಯೂ ಉರುಳಿಬೋರೆ ರಸ್ತೆ ಬರುವುದಿಲ್ಲ ಎಂದರೆ ಸರಿ. ವಸಂತ ರವರು ಕ್ರಯಕ್ಕೆ ಪಡೆದಿರುವ ಆಸ್ತಿಯ ಚಕ್ಕುಬಂದಿ ಬೇರೆ ಎಂದರೆ ಸರಿ. 5 ನೇ ಪ್ರತಿವಾದಿ ಕ್ರಯಕ್ಕೆ ಪಡೆದ ಸ್ವತ್ತು ನಮ್ಮ ತಂದೆಯವರು ವಿಭಾಗ ಮೂಲಕ ಪಡೆದ ಸ್ವತ್ತಿನಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಸೇರಿದ 10 ಎಕರೆ ಜಮೀನಿನ ಪೂರ್ತಿ ಚಕ್ಕುಬಂದಿ ಪೂರ್ವಕ್ಕೆ ಉರುಳಿಬೋರೆ ರಸ್ತೆ, ಪಶ್ಚಿಮಕ್ಕೆ ಬಸವರಾಜು, ಸಣ್ಣಯ್ಯ, ಕೆಂಚಿಗಣ್ಣ ರವರ ಜಮೀನು, ಉತ್ತರಕ್ಕೆ ರಸ್ತೆ ಮತ್ತು ಲತಾ ರವರ ಜಮೀನು ಮತ್ತು ದಕ್ಷಿಣಕ್ಕೆ ಕೃಷ್ಣಪ್ಪ ಮತ್ತು 5 ನೇ ಪ್ರತಿವಾದಿಯ ಜಮೀನು ಬರುತ್ತದೆ. ನಾನು ಕ್ರಯಕ್ಕೆ ಪಡೆದಿರುವ 4 ಎಕರೆ ಜಮೀನಿನ

ಮೇಲೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಒಂದು ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ ಎಂದರೆ ಸರಿ. ಕ್ರಿಮಿನಲ್ ಮೊಕದ್ದಮೆ ದಾಖಲಾದ ನಂತರ ಪ್ರಸ್ತುತ ದಾವೆಯನ್ನು ನಾನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ತಮ್ಮ ವಾದ ಪತ್ರದಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಮತ್ತು ವಸಂತಕುಮಾರ್ ನಡುವೆ ಜಮೀನಿಗೆ ಸಂಬಂಧಪಟ್ಟಂತೆ ಈ ಹಿಂದಿನಿಂದ ವಿವಾದ ಇದೆ ಎಂದರೆ ಸರಿ. ನಮ್ಮ ತಂದೆಯವರು 10 ಜಮೀನಿನಲ್ಲಿ ವಿಭಾಗ ಮಾಡಿಕೊಂಡಿದ್ದು ಅದರ ಮೂಲಕ ಯಾರು ಯಾರಿಗೆ ಹಿಸ್ಸಾ ಬಂದಿರುತ್ತದೋ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ವಸಂತ ರವರು ಖರೀದಿ ಮಾಡಿರುವ ಜಮೀನಿನಲ್ಲಿ ತಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ತಾವು ಈ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.